ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು-ಮಡಿಕೇರಿ

**ಸ್ಪೆಷಲ್ ಕೇಸ್(ಕರಪ್ಷನ್) ಸಂಖ್ಯೆ: 61/2016**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಆರ್.ಬಿ. ರವಿ | ಪ್ರಾಸಾಃ 6 |
| ತಂದೆಯ ಹೆಸರು | : | ಆರ್ ಬಾಬು ಆಚಾರ್ | ಚಾಸಾಃ 8 |
| ವಯಸ್ಸು | : | 53 ವರ್ಷ | |
| ವೃತ್ತಿ | : | ಚಿನ್ನದ ಕೆಲಸ | |
| ವಾಸ | : | ಮಡಿಕೇರಿ | |

ಸಾಕ್ಷಿಯನ್ನು ದಿನಾಂಕ **22-12-2023** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯವಿಚಾರಣೆ: ಸರ್ಕಾರಿ ಅಭಿಯೋಜಕರಿಂದ:**

ಕಳೆದ 32 ವರ್ಷಗಳಿಂದ ನಾನ ಅಕ್ಕಸಾಲಿಗ ಕೆಲಸ ಮಾಡುತ್ತಾ ಇದ್ದೇನೆ. ಸುಮಾರು ಪ್ರಕರಣದಲ್ಲಿ ನಾನು ಚಿನ್ನ ಬೆಳ್ಳಿಯ ಮೌಲ್ಯ ನಿರ್ಧರಿಸುವ ಕೆಲಸ ಮಾಡಿರುತ್ತೇನೆ. ದಿಃ 24.5.2013 ರಂದು ನನ್ನನ್ನು ಸಂಜೆ 4 ಗಂಟೆಗೆ ಕರ್ನಾಟಾಕ ಬ್ಯಾಂಕ್ ಮಡಿಕೇರಿ ಶಾಖೆಗೆ ಲೋಕಾಯುಕ್ತ ಪೊಲೀಸರು ನನ್ನನ್ನು ಕರೆದುಕೊಂಡು ಹೋಗಿದ್ದರು. ಅವರು ದೂರವಾಣಿ ಮೂಲಕ ನನಗೆ ತಿಳಿಸಿದ್ದರಿಂದ ನಾನು ಅಲ್ಲಿಗೆ ಹೋಗಿದ್ದೆ. ಕಮಲ ಅವರಿಗೆ ಸಂಬಂಧಪಟ್ಟ ಚಿನ್ನ ಲಾಕರಿ ನಲ್ಲಿ ಇತ್ತು, ಅದನ್ನು ಬ್ಯಾಂಕ್ ಮ್ಯಾನೇಜರ್ ಅವರು ಹಾಜರು ಪಡಿಸಿದ ಮೇರೆಗೆ ಅದನ್ನು ನಾನು ತೂಕ ಮಾಡಿ ಬೆಲೆ ನಿರ್ಧರಿಸಿರುತ್ತೇನೆ. ಅಲ್ಲಿ ನಾನು ಸುಮಾರು 22 ಆಭರಣಗಳನ್ನು ಬೇರೆ ಬೇರೆ ತೂಕ ಮಾಡಿ ಅವುಗಳ ತೂಕ ಮತ್ತು ಅಂದಾಜು ಬೆಲೆಯನ್ನು ನಿರ್ಧರಿಸಿರುತ್ತೇನೆ. ಈ ಸಂಬಂಧವಾಗಿ ಪೊಲೀಸರು ಮಹಜರು ಮಾಡಿ ನನ್ನ ಸಹಿ ಪಡೆದಿರುತ್ತಾರೆ. ಸದರಿ ಮಹಜರು ಈಗಾಗಲೇ ನಿಪಿ-192 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ನನ್ನ ಸಹಿ ನಿಪಿ-192 ಬಿ ಎಂದು ಗುರುತಿಸಲಾಯಿತು. ನಾನು ತೂಕ ಮಾಡಿದ್ದ ಚಿನ್ನದ ಒಡವೆಗನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಒಡವೆಗಳನ್ನು ಈಗಾಗಲೇ ಮು. ಮು.ಮಾ--28 ರಿಂದ ಮು. ಮು.ಮಾ- 49 ಎಂದು ಗುರುತಿಸಲ್ಪಟ್ಟಿದೆ.

**ಪಾಟೀಸವಾಲು- ಆರೋಪಿ ಪರವಾಗಿ ಶ್ರೀ ಎಂ ಎನ್ ಎಸ್. ವಕೀಲರಿಂದ:**

ನಾನು ಚಿನ್ನದ ಮೌಲ್ಯವನ್ನು ಅಮಾನತ್ತು ಪಡಿಸಿಕೊಂಡ ದಿನ ಮೌಲ್ಯ ಏನಿತ್ತು ಅದರ ಪ್ರಕಾರ ಹೇಳಿದ್ದೇನೆ ಎಂದರೆ ಸರಿ. ನಾನು ತೂಕ ಮಾಡಿದ ಚಿನ್ನದ ಒಡವೆಗಳು ಎಷ್ಟು ವರ್ಷ ಹಳೆಯದ್ದು ಎಂದು ನನಗೆ ಹೇಳಾಗುವುದಿಲ್ಲ. ಚಿನ್ನದ ಮೌಲ್ಯ ಹೇಳಲು ನನಗೆ ಲೈಸನ್ಸ ಇರುತ್ತದೆ. ಲೈಸನ್ಸ copy ಯನ್ನು ಲೋಕಯುಕ್ತಾ ಪೊಲೀಸರು ಬೇರೆ ಪ್ರಕರಣಕ್ಕೆ ಪಡೆದುಕೊಂಡಿದ್ದಾರೆ. ನಾನು ಪೋಲಿಸರ ಒತ್ತಡದ ಮೇರೆಗೆ ಸುಳ್ಳು ಮೌಲ್ಯವನ್ನು ಹೇಳಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸಾ. ಸ. ಇ. ಎ. ಒ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು-ಮಡಿಕೇರಿ.